೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಕೊಪ್ಪಳ ಜಿಲ್ಲೆ

ಸಾಳ್ವ ಭಾರತ

ಒಂದು ಚಾರಿತ್ರಿಕ ಅಧ್ಯಯನ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು- ೫೬೦ ೦೧೮.

೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಕೊಪ್ಪಳ ಜಿಲ್ಲೆ

ಸಾಳ್ವ ಭಾರತ

ಒಂದು ಚಾರಿತ್ರಿಕ ಅಧ್ಯಯನ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SALVA BHARATA - ONDU CHARITRIKA ADYAYANA
by : **Dr. Chikkanna Yennekatte**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vi + 183 Price : Rs.**75=00** ; **2011**

ಮೊದಲನೇ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಬೆಲೆ : ಎಪ್ಪತ್ತೈದು ರೂಪಾಯಿಗಳು

ಮುಖಪುಟ ವಿನ್ಯಾಸ : ಶ್ರೀ ವಿ.ಎಂ. ಮಂಜುನಾಥ

ಮುದ್ರಣ : ಶ್ರೀರಂಗ ಪ್ರಿಂಟರ್ಸ್, ನಂ.೩೪, ೨೮ನೇ ಕ್ರಾಸ್, ೯ನೇ ಮೇನ್,
ಬನಶಂಕರಿ ಇಂಡಸ್ಟ್ರಿಯಲ್ ಏರಿಯಾ, ಬನಶಂಕರಿ,
ಬೆಂಗಳೂರು – ೫೬೦ ೦೭೦.

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮೂರು ವರ್ಷಗಳ ಆಡಳಿತಾವಧಿಯಲ್ಲಿ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಅದೃಷ್ಟ ಕೆಲವು ಅಧ್ಯಕ್ಷರಿಗೆ ಮಾತ್ರ ಬರುತ್ತದೆ. ಅಂಥ ಸುಯೋಗ ನನ್ನ ಪಾಲಿಗೆ ಬಂದಿರುವುದರಿಂದ ಚಿತ್ರದುರ್ಗ, ಗದಗ, ಬೆಂಗಳೂರುಗಳ ನಂತರ ಇದೀಗ ೨೦೧೧ರ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭರದ ಸಿದ್ಧತೆಗಳು ನಡೆಯುವ ಕ್ಷಣಗಣನೆ ಆರಂಭವಾಗಿದೆ. ಎಂದಿನಂತೆ ಈ ಸಮ್ಮೇಳನದ ಹೊತ್ತಿಗೂ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಘನತೆಗೆ ಯೋಗ್ಯವೆಂದು ಪ್ರಕಟಣ ಸಮಿತಿ ಆಯ್ಕೆ ಮಾಡಿರುವ ಕೃತಿಗಳನ್ನು ಹೊರತರಲಾಗುತ್ತಿದೆ.

ನಾನು ಅಧ್ಯಕ್ಷನಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶ ಮಾಡಿದಾಗಿನಿಂದ ಸಾಹಿತ್ಯ ಪರಿಷತ್ತಿನಲ್ಲಿ ಹಲವು ಸಕಾಲಿಕವೆನಿಸುವಂಥ ಸುಧಾರಣೆಗಳನ್ನು ಮಾಡುತ್ತಾ ಬಂದಿದ್ದೇನೆ. ಇವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಪುಸ್ತಕಗಳು ಒಳಗೆ ಮೌಲಿಕವಾಗಿರುವಂತೆ ಹೊರಗೆ ಆಕರ್ಷಕವಾಗಿರಬೇಕೆನ್ನುವುದೂ ಒಂದು. ಪುಸ್ತಕಗಳ ಮೂಲಕ ಓದುಗ ವರ್ಗದಲ್ಲಿ ಸದಭಿರುಚಿಯನ್ನು ನಿರ್ಮಾಣ ಮಾಡುವುದರಲ್ಲಿ ಪರಿಷತ್ತಿಗೆ ಒಂದು ವಿಶೇಷ ಜವಾಬ್ದಾರಿಯಿದೆ ಎಂಬುದನ್ನು ನಾನು ಮನಗಂಡೇ ಇಂಥ ಸುಧಾರಣೆಗೆ ಕೈ ಹಚ್ಚಿದ್ದೇನೆ. ಪರಿಷತ್ತಿನ ಪುಸ್ತಕಗಳು ಆತ್ಮಾಭಿಮಾನದಿಂದ ತಲೆಯೆತ್ತಿ ನಿಲ್ಲುವುದಕ್ಕೆ ಏನೇನು ಸಾಧ್ಯವಿತ್ತೋ ಆ ಎಲ್ಲ ಪ್ರಯೋಗಗಳನ್ನು ಮಾಡಲಾಗಿ ಇವತ್ತು ನಮ್ಮ ಪ್ರಕಟಣೆಗಳು ಯಾರಿಗೂ ಕಡಿಮೆಯಿಲ್ಲದಂತೆ ಭರಾಟೆಯಿಂದ ಖರ್ಚಾಗುತ್ತಿವೆ. ಹೊಸ ಬಣ್ಣಗಳಲ್ಲಿ, ಹೊಸ ವಿನ್ಯಾಸಗಳಲ್ಲಿ ಕಂಗೊಳಿಸುತ್ತಿವೆ. ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಬಹುಬೇಗ ಖರ್ಚಾಗುತ್ತಿವೆ. ಮರುಮುದ್ರಣಗೊಳ್ಳುತ್ತಿವೆ. ಈ ಬಾರಿಯ ಅಕ್ಷರಜಾತ್ರೆಯಲ್ಲಿ ಅರ್ಥಪೂರ್ಣ ಪುಸ್ತಕಗಳು ಇರಬೇಕೆನ್ನುವ ಎಚ್ಚರದೊಂದಿಗೆ ಈ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ೨೦೧೧ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳ್ಳಲಿರುವ ಈ ಪುಸ್ತಕಗಳು ಸಹೃದಯರ ಜ್ಞಾನಭಂಡಾರವನ್ನು ವಿಸ್ತರಿಸಿ, ಅವರು ಬಯಸುವ ಸಂತೋಷವನ್ನು ಕೊಡಲೆಂದು ಆಶಿಸುತ್ತೇವೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಕೃತಜ್ಞತೆಗಳು

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನಾನು ಒಪ್ಪಿಸಿದ ಈ ಪುಸ್ತಕ ರೂಪುಗೊಂಡದ್ದು ೧೯೯೪ ರಲ್ಲಿ. ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ನನಗೆ ಮಾರ್ಗದರ್ಶನ ಮಾಡಿದವರು, ನಾಡಿನ ಪ್ರಸಿದ್ಧ ವಿದ್ವಾಂಸರಾದ ಡಾ.ಕಮಲಾ ಹಂಪನಾ ಅವರು. ಕ್ಷೇತ್ರ ಕಾರ್ಯ, ಕೃತಿ-ಕವಿಯ ನಿರ್ಧಾರ, ನಿಲುವುಗಳ ಬಗೆಗೂ ನನಗೆ ಮುಕ್ತ ಅವಕಾಶ ನೀಡಿದ್ದಾರೆ. ನಾನು ಸಾಹಿತ್ಯದ ವಿದ್ಯಾರ್ಥಿಯಾದರೂ, ಜೈನ ಸಂಸ್ಕಾರಗಳ ಬಗೆಗೆ ತಿಳುವಳಿಕೆ ಹೊಂದಿದವನಲ್ಲ. ಜೈನ ಸಂಸ್ಕೃತಿ, ಭಾರತ ಪರಂಪರೆಯ ಈ ಸಂಶೋಧನೆಗೆ, ಡಾ.ಕಮಲಾ ಹಂಪನಾ ಅವರ ಮಾರ್ಗದರ್ಶನ ಸಾಧ್ಯವಾದದ್ದು ನನ್ನ ಯೋಗಾಯೋಗವೆಂದೇ ಭಾವಿಸಿದ್ದೇನೆ. ಡಾ. ಹಂಪನಾ ಮತ್ತು ಡಾ. ಕಮಲಾ ಹಂಪನಾ ಅವರ ಸಹಕಾರ ಈ ಸಂಶೋಧನೆಗೆ ಮಾತ್ರ ಮಿತಿಗೊಳ್ಳದೆ, ಅಧ್ಯಯನ, ಅಧ್ಯಾಪನ, ಬರವಣಿಗೆಗೆ ನಿತ್ಯವೂ ಸಾಧ್ಯವಾಗುತ್ತಿದೆ. ಇದು ನನ್ನ ಭಾಗ್ಯವೆಂದು ಭಾವಿಸುತ್ತಾ, ಈ ಹಿರಿಮೆಗಾಗಿ ನಾಡೋಜ ಹಂಪನಾ, ನಾಡೋಜ ಕಮಲಾ ಹಂಪನಾ ದಂಪತಿಗಳಿಗೆ ಕೃತಜ್ಞತೆಯಿಂದ ನೆನೆ ನೆನೆದು ಕೈಯ ಮುಗಿಯುತ್ತೇನೆ.

ಅಹಿಂಸೆಯೇ ಆದಿ, ಮಧ್ಯ ಹಾಗೂ ಅಂತ್ಯವನ್ನಾಗಿಸಿಕೊಂಡಿರುವ ಜೈನ ಸಂಸ್ಕೃತಿ ಸಮಸ್ತ ಜೀವ ಸಂಕುಲಕ್ಕೆ ಒಳಿತನ್ನೇ ಬಯಸುತ್ತದೆ. ಸಾಳ್ವ ಕವಿಯ ಈ ಸಾಳ್ವಭಾರತ ಕೃತಿ, ಜೈನ-ವೈದಿಕ ಈ ಎರಡೂ ಪರಂಪರೆಯನ್ನೊಳಗೊಂಡ ಅಪರೂಪದ ಕಾವ್ಯ. ಹರಿವಂಶ, ಯದುವಂಶ, ಕುರುವಂಶದವರ ಕಥೆ ಇಲ್ಲಿ ಬರುತ್ತದೆ. ನೇಮಿನಾಥನ ಜೊತೆಗೆ ಕೃಷ್ಣ, ಕೌರವರು, ಪಾಂಡವರು, ಜರಾಸಂಧ, ಶಿಶುಪಾಲ, ಕಂಸ ಇವರೆಲ್ಲರ ಭವದ ವರ್ಣನೆ ಇಲ್ಲಿಯ ಕೇಂದ್ರನೆಲೆ. ಹಿಂಸೆಯಿಂದ ಅಹಿಂಸೆಯ ಕಡೆ ವಾಲುವುದು ಈ ಗ್ರಂಥದ ಮೂಲ ಆಶಯ. ವಿಶಿಷ್ಟತನದ ಈ ಕಾವ್ಯವನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲು ನನಗೆ ಪ್ರಮುಖ ಪ್ರೇರಣೆಯಾಯಿತು.

ನನ್ನ ಸಂಶೋಧನೆಯ ಕೆಲಸ ಆರಂಭವಾದುದು ೧೯೮೮ ರಿಂದ. ಈ ವೇಳೆಗಾಗಲೇ ನಾನು ಬೆಂಗಳೂರಿನ ಎಸ್.ಜೆ.ಆರ್. ಮಹಿಳಾ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದೆ. ನನ್ನ ಸಂಶೋಧನೆಯ ಜೊತೆಗೆ, ವೈಯಕ್ತಿಕವಾಗಿಯೂ ಮಹದುಪಕಾರ ಮಾಡಿದವರು ಪ್ರಾಂಶುಪಾಲರಾಗಿದ್ದ ಪ್ರೊ. ಸಿ.ಎನ್.ಶಾರದಮ್ಮ ಅವರು. ಅವರ ಈ ಸಹಾಯಕ್ಕೆ ಸದಾ ಋಣಿಯಾಗಿರುತ್ತೇನೆ.

ಕ್ಷೇತ್ರಕಾರ್ಯ, ಗ್ರಂಥ ಸಹಾಯ ಈ ವಿಷಯಗಳಲ್ಲಿ ನೆರವಾದವರು ಡಾ. ಎಂ.ಎ. ಜಯಚಂದ್ರ ಮತ್ತು ಪ್ರೊ. ಶುಭಚಂದ್ರ ಅವರು. ಪ್ರೊ. ಡಿ.ಲಿಂಗಯ್ಯ ಅವರ ನೆರವನ್ನು ಮರೆಯುವಂತಹುದಲ್ಲ. ನನ್ನೆಲ್ಲಾ ಒಳ್ಳೆಯ ಕಾರ್ಯಕ್ಕೆ ಸದಾ ನೆರವಾಗುತ್ತಾ ಬರುತ್ತಿರುವ ಶ್ರೀ ಕಾತ ಚಿಕ್ಕಣ್ಣ, ಶ್ರೀ ಎಚ್.ಸಿ. ಶಿವಕುಮಾರ್ ಇವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ನಾಡಿನ ಹೆಮ್ಮೆಯ ಸಾಹಿತ್ಯ, ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಈ ಪುಸ್ತಕವನ್ನು ಪ್ರಕಟಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್ ಅವರನ್ನು ವಿಶೇಷವಾಗಿ ಸ್ಮರಿಸುತ್ತೇನೆ. ನನಗೆ ಪಿಎಚ್.ಡಿ ಪದವಿ ನೀಡಿದ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕಲಿಸಿದ ಎಲ್ಲ ಗುರುವರ್ಯರುಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರೊ. ಚಿಕ್ಕಣ್ಣ ಯಣ್ಣೆಕಟ್ಟೆ

ಪರಿವಿಡಿ

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೬ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ - ಕನ್ನಡಿಗ - ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ನಡೆಯುತ್ತಿರುವ ೭೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ರಾಜ್ಯಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು- ೫೬೦ ೦೧೮.